## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವಿಶ್ವಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಅನುಷ್ಠಾನ ಕುರಿತು.

ಓದಲಾಗಿದೆ:- ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಇವರ ಕಡತ ಸಂಖ್ಯೆ: ಕೆಯುಐಡಿಎಫ್‌ಸಿ: ಕೆಯುಡಬ್ಲ್ಯುಎಎಸ್‌ಐಪಿ:ಇಎಕ್ಸ್‌ಟಿಎಸ್:24*7/97

ಪ್ರಸ್ತಾವನೆ:-

ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 24*7 ನಿರಂತರ ನೀರು ಸರಬರಾಜು ಸೇವೆಯು ಪ್ರಾತ್ಯಕ್ಷಿಕ ವಲಯಗಳಲ್ಲಿ ಯಶಸ್ವಿನಿಂದಾಗಿ ಮೂರು ಮಹಾನಗರ ಪಾಲಿಕೆಗಳು ನಿರ್ಣಯಗಳನ್ನು ಪಾಸು ಮಾಡಿ, ಸದರಿ ನಗರಗಳ ಉಳಿದ ಎಲ್ಲಾ ಭಾಗಗಳಿಗೆ 24*7 ನಿರಂತರ ನೀರು ಸರಬರಾಜು ವ್ಯವಸ್ಥೆಯನ್ನು ಅಳವಡಿಸಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳನ್ನು ಆಧರಿಸಿ ಸರ್ಕಾರ ಆದೇಶ ಸಂಖ್ಯೆ: ನಅಇ 81 ಜಿಆರ್‌ಜಿ 2008, ಬೆಂಗಳೂರು, ದಿನಾಂಕ 06-10-2008 ರಲ್ಲಿ ಯೋಜನೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

2008-09 ಸಾಲಿನಲ್ಲಿ 2031ನೇ ಇಸ್ವಿಯ ಪ್ರಾಕ್ಷೇಪಿತ ಜನಸಂಖ್ಯೆಗಾಗಿ ತಯಾರಿಸಿದ ದೇಣಾ ಅಂದಾಜುಗಳ ಪ್ರಕಾರ ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ 24*7 ನೀರು ಸರಬರಾಜು ಉನ್ನತೀಕರಿಸಲು ಯೋಜನಾ ಅಂದಾಜು ಅನುಕ್ರಮವಾಗಿ ರೂ. 220 ಕೋಟಿ, ರೂ 155 ಕೋಟಿ ಮತ್ತು 360 ಕೋಟಿ ಆಗಿತ್ತು ಹೀಗಾಗಿ, ಒಟ್ಟು ಅಂದಾಜು ರೂ. 735 ಕೋಟಿಗಳಾಗಿತ್ತು.

ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯು ವ್ಯಾಪಕ ಬಂಡವಾಳದ ರೂಪರೇಷೆಗಳು ಈ ಕೆಳಕಂಡಂತೆ ಇದ್ದವು:

(ರೂ. ಕೋಟಿಗಳು)

| | | | |
|---|---|---|---|
| 1 | ನಿರ್ಮಾಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಖಾಸಗಿ ಸಂಸ್ಥೆಯ ಬಂಡವಾಳ | 50% | 367.50 |
| 2 | ವಿಜಿಎಫ್ ಅಡಿಯಲ್ಲಿ ಕೇಂದ್ರ ಸರ್ಕಾರದ ನೆರವಿನ ಬಂಡವಾಳ | 20% | 147.00 |
| 3 | ರಾಜ್ಯ ಸರ್ಕಾರದ ಬಂಡವಾಳ | 20% | 147.00 |
| 4 | ನಗರ ಸ್ಥಳೀಯ ಸಂಸ್ಥೆಯ ಪಾಲು | 10% | 73.50 |
| | ಒಟ್ಟು | 100% | 735.00 |

ಇತರೆ ಊಹೆಗಳು: ಖಾಸಗಿ ಆಪರೇಟರ್‌ಗೆ ಪರ್ಫಾರ್ಮೆನ್ಸ್ ಆಧಾರದ ಮೇಲೆ ಒಪ್ಪಂದ ಅವಧಿ ಉದ್ದಕ್ಕೂ ಪೂರ್ವ ನಿರ್ಧಾರಿತ ಸಾಧನೆ ಗುಣಮಟ್ಟವನ್ನು ಆಧರಿಸಿ ಪಾವತಿ ಮಾಡಲಾಗುವುದು. ಈ ಪಾವತಿಗಳು, ಹೂಡಿಕೆ ಹಾಗೂ ಸೇವಾ ಶುಲ್ಕಗಳನ್ನು ಒಳಗೊಂಡಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ತಮ್ಮ ಪಾಲಿನ ಹಣವನ್ನು ತಮ್ಮ ಸ್ವಂತದ ಮೂಲಗಳು ಅಥವಾ ಎಸ್.ಎಫ್.ಸಿ. ಅನುದಾನದಿಂದ ಭರಿಸಬೇಕಾಗುತ್ತದೆ. ಹಾಗೂ ಸ್ಥಳೀಯ ಸಂಸ್ಥೆಗಳು ಸರ್ಕಾರದೊಂದಿಗೆ ಸಮಾಲೋಚಿಸಿ ಸೂಕ್ತ ನೀರಿನ ದರಗಳನ್ನು ನಿಗದಿಪಡಿಸಬೇಕಾಗುತ್ತದೆ. ನೀರಿನ ದರಗಳ ಸಂಗ್ರಹಣೆ ಮತ್ತು ಹೂಡಿಕೆಗಳ ಮರು ಪಾವತಿ ಆಯಾ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಎಸ್.ಎಫ್.ಸಿ. ಅನುದಾನಗಳನ್ನು ಖಾತರಿಯಾಗಿ ಬಳಸಬಹುದಾಗಿದೆ.

ND 000
m-KUWSIP

ಯೋಜನಾ ವರದಿಗಳು ಮತ್ತು ಆರ್ಥಿಕ ಮಾದರಿಗಳ ತಯಾರಿಕೆ ಕಾರ್ಯವನ್ನು ಕೆ.ಯು.ಐ.ಡಿ.ಸಿ.ಎಫ್.ಸಿ. ಸಮಾಲೋಚಕರ (ಮೆ॥ ಟಾಟಾ ಕನ್ಸಲ್ಟಿಂಗ್ ಇಂಜಿನೀಯರ್ಸ್ ಲಿ. ಮತ್ತು ಮೆ॥ ಶ್ರೇಯಸ್ ಇನ್ಫ್ರಾಸ್ಟ್ರಕ್ಚರ್) ಇವರಿಗೆ ವಹಿಸಲಾಗಿದೆ. ಸಮಾಲೋಚಕರು 2041ನೇ ಇಸ್ವಿಯ ಪ್ರಾಕ್ಷೇಪಿತ ಜನಸಂಖ್ಯೆಗಾಗಿ ತಯಾರಿಸಿದ ಯೋಜನಾ ವರದಿಗಳ ಪ್ರಕಾರ ಅಂದಾಜು ಈ ಕೆಳಕಂಡಂತೆ ಇರುತ್ತವೆ.

| ಕ್ರ.ಸಂ. | ನಗರ | ಯೋಜನಾ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| 1 | ಬೆಳಗಾವಿ | 470 |
| 2 | ಗುಲ್ಬರ್ಗಾ | 480 |
| 3 | ಹುಬ್ಬಳ್ಳಿ-ಧಾರವಾಡ | 810 |
| | ಒಟ್ಟು | 1760 |

ಕೇಂದ್ರ ಸರ್ಕಾರವು ತಮ್ಮ ಪತ್ರ ಸಂಖ್ಯೆ 3ಡಿ(3)/1/2008/ಪಿಪಿಪಿ ದಿನಾಂಕ: 02-09-2009ರಲ್ಲಿ ತಿಳಿಸಿದಂತೆ ವಿ.ಜಿ.ಎಫ್. ಯೋಜನೆ ಅಡಿ ಖಾಸಗಿ ಆಪರೇಟರ್‌ಗೆ ವರ್ಷಾಸನ ಪಾವತಿ ನೀಡಲು ಅವಕಾಶ ಇಲ್ಲದಿರುವುದರಿಂದ, ಯೋಜನಾ ವೆಚ್ಚದ ಅರ್ಧದಷ್ಟು ಹಣವನ್ನು (ರೂ.880 ಕೋಟಿ) ವಿಶ್ವ ಬ್ಯಾಂಕ್‌ನಿಂದ ನೆರವನ್ನು ಪಡೆಯಲು ಕೇಂದ್ರ ಸರ್ಕಾರಕ್ಕೆ ದಿನಾಂಕ 30-07-2011 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಸದರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ದಿನಾಂಕ 01-01-2012ರಲ್ಲಿ ವಿಶ್ವಬ್ಯಾಂಕ್‌ಗೆ ಶಿಫಾರಸ್ಸು ಮಾಡಿರುತ್ತದೆ. ವಿಶ್ವಬ್ಯಾಂಕ್ ದಿನಾಂಕ 24-01-2012ರಲ್ಲಿ ಯುಎಸ್ ಡಾಲರ್ 190 ಮಿಲಿಯನ್ ಸಹಾಯ ನೀಡಲು ಒಪ್ಪಿಕೊಂಡಿತ್ತು. ಈ ಉನ್ನತೀಕರಣ ಯೋಜನೆಗೆ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಎಂದು ಕರೆಯಲಾಗಿದೆ. ಯೋಜನಾ ತಯಾರಿಕೆ ಚಟುವಟಿಕೆಗಳು ಪ್ರಗತಿಯಲ್ಲಿದ್ದು ಎರಡು ಅಧ್ಯಯನಗಳನ್ನು (ವಲಯ ಪರಿಸರ ಹಾಗೂ ಸಾಮಾಜಿಕ ಮಾಪನ ಹಾಗೂ ಸಂವಹನ ಮತ್ತು ಸಾಧ್ಯಸ್ಥಿತಿ ತಂತ್ರ ರಚನೆ) ಕೈಗೆತ್ತಿಕೊಳ್ಳಲಾಗಿದೆ. ಸಾಲದ ಮಾತುಕತೆಗಳು ಏಪ್ರಿಲ್ 2014 ರಲ್ಲಿ ನಿರೀಕ್ಷಿಸಲಾಗಿದೆ. ಮೂರು ನಗರಗಳಲ್ಲಿ ಉನ್ನತೀಕರಣ ಯೋಜನೆಯೊಂದಿಗೆ ನಗರ ನೀರು ವಲಯದಲ್ಲಿ ಸುಧಾರಣೆಗಳನ್ನು ತರಲು ಉದ್ದೇಶಿಸಿದೆ.

2013-14 ಸಾಲಿನ ಮಂಡಿಸಿದ ಆಯ-ವ್ಯಯ ಭಾಷಣದಲ್ಲಿ ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ 24*7 ನಿರಂತರ ನೀರು ಸರಬರಾಜು ಉನ್ನತೀಕರಣ ಯೋಜನೆಯನ್ನು ಒಟ್ಟು ರೂ. 1760 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದೆಂದು ಘೋಷಿಸಲಾಗಿದೆ. ಪ್ರಸಕ್ತ ಸಾಲಿನ ಆಯ-ವ್ಯಯದಲ್ಲಿ ಈ ಯೋಜನೆಗೆ ರೂ. 30.00 ಕೋಟಿ ಒದಗಿಸಲಾಗಿದೆ.

ಈ ಮಧ್ಯೆ ಕೆ.ಯು.ಡಬ್ಲ್ಯೂ.ಎಸ್. & ಡಿ.ಬಿ. ಸಲ್ಲಿಸಿರುವ ಪ್ರಸ್ತಾವನೆಯನ್ನು ಆಧರಿಸಿ, ಹುಬ್ಬಳ್ಳಿ-ಧಾರವಾಡ ನಗರಗಳ 13 ವಾರ್ಡ್‌ಗಳಲ್ಲಿ (3 ಪೂರ್ಣ ಮತ್ತು 10 ಭಾಗಶಃ ವಾರ್ಡ್‌ಗಳು) ಮಲಪ್ರಭಾ ನೀರು ಸರಬರಾಜು ಯೋಜನೆ ಅಡಿ ಉಳಿತಾಯವಾದ ರೂ. 42.90 ಕೋಟಿ ಅಂದಾಜಿನಲ್ಲಿ ಹಾಗೂ ಸದರಿ ನಗರಗಳ 17 ವಾರ್ಡ್‌ಗಳಲ್ಲಿ (5 ಪೂರ್ಣ ಮತ್ತು 12 ಭಾಗಶಃ ವಾರ್ಡ್‌ಗಳು) ರೂ. 71 ಕೋಟಿ(ಶೇ. 40 ಸರ್ಕಾರದ ಅನುದಾನ, ಶೇ. 50 ಆರ್ಥಿಕ ಸಂಸ್ಥೆಗಳಿಂದ ಸಾಲ ಮತ್ತು ಶೇ. 10 ಸ್ಥಳೀಯ ಸಂಸ್ಥೆಗಳಿಂದ ಕೊಡುಗೆ ಈ ಆರ್ಥಿಕ ಮಾದರಿಯ) ಅಂದಾಜಿನಲ್ಲಿ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ ನಅಇ 14ನನೀಸ 2012 ದಿನಾಂಕ 12-09-2012 ಮತ್ತು ಸಂಖ್ಯೆ:ನಅಇ 2 ನನೀಸ 2012 ದಿನಾಂಕ 08-10-2012ರಲ್ಲಿ ಅನುಕ್ರಮವಾಗಿ ಸರ್ಕಾರದ ಅನುಮೋದನೆ ನೀಡಲಾಗಿದೆ. ಕೆ.ಯು.ಡಬ್ಲ್ಯೂ.ಎಸ್. & ಡಿ.ಬಿ. ಈಗಾಗಲೇ ರೂ.71 ಕೋಟಿ ಯೋಜನೆ ಅಡಿ ಕಾಮಗಾರಿಗಳಿಗಾಗಿ ಗುತ್ತಿಗೆಯನ್ನು ನೀಡಿದ್ದು, ರೂ. 42.5 ಕೋಟಿ ಯೋಜನೆ ಅಡಿ ಬಿಡ್‌ಗಳನ್ನು ಕರೆದಿರುತ್ತದೆ.

ಸ್ಥಳೀಯ ಸಂಸ್ಥೆಗಳು, ಕೆ.ಯು.ಡಬ್ಲ್ಯೂ.ಎಸ್.&ಡಿ.ಬಿ. ಹಾಗೂ ಕೆಯುಐಡಿಎಫ್‌ಸಿ ಗಳೊಂದಿಗೆ ಸಮಾಲೋಚಿಸಿ, ಯೋಜನಾ ವರದಿಗಳನ್ನು ಸಮಾಲೋಚಕರು ಸಿದ್ಧಪಡಿಸುತ್ತಾರೆ.

ಯೋಜನೆಯನ್ನು ಎರಡು ಹಂತಗಳಲ್ಲಿ (ಅಂದರೆ 2026ರ ಪ್ರಾಕ್ಷೇಪಿತ ಜನಸಂಖ್ಯೆಗಾಗಿ ಮೊದಲನೆ ಹಂತ ಮತ್ತು ತರುವಾಯ 2041ರ ಪ್ರಾಕ್ಷೇಪಿತ ಜನಸಂಖ್ಯೆಗಾಗಿ ಎರಡನೇ ಹಂತ) ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಅದೇ ಪ್ರಕಾರ ಎರಡು ಹಂತಗಳ ಹೂಡಿಕೆಯನ್ನು ಈ ಕೆಳಕಂಡಂತೆ ಲೆಕ್ಕ ಹಾಕಲಾಗಿದೆ.

| ಸ್ಥಳೀಯ ಸಂಸ್ಥೆ | ಒಟ್ಟು ಬಂಡವಾಳ | ಹಂತ - I | | | | | ಹಂತ - I | | | |
|---|---|---|---|---|---|---|---|---|---|---|
| | | ಬಂಡವಾಳ | ರಾಜ್ಯ ಸರ್ಕಾರದ ನೆರವು | ರಾಜ್ಯ ಸರ್ಕಾರದ ನೆರವು | ಸ್ಥಳೀಯ ಸಂಸ್ಥೆಯ ಪಾಲು | ಸ್ಥಳೀಯ ಸಂಸ್ಥೆಯ ಪಾಲು | ಬಂಡವಾಳ | ರಾಜ್ಯ ಸರ್ಕಾರದ ನೆರವು | ರಾಜ್ಯ ಸರ್ಕಾರದ ನೆರವು | ಸ್ಥಳೀಯ ಸಂಸ್ಥೆಯ ಪಾಲು |
| ಗುಲ್ಬರ್ಗಾ | 635 | 489 | 72% | 352 | 28% | 137 | 146 | 0% | 0.00 | 100% |
| ಬೆಳಗಾವಿ | 663 | 427 | 72% | 308 | 28% | 120 | 236 | 0% | 0.00 | 100% |
| ಹುಬ್ಬಳ್ಳಿ-ಧಾರವಾಡ | 1146 | 763 | 72% | 550 | 28% | 214 | 383 | 0% | 0.00 | 100% |
| ಒಟ್ಟು | 2444 | 1,679 | 72% | 1,209 | 28% | 470 | 765 | 0% | 0 | 100% |

ಟಿಪ್ಪಣಿ:

1) ಪ್ರಸ್ತಾವಿತ ಹೂಡಿಕೆಗಳು ಭೌತಿಕ ಮತ್ತು ದರಗಳ ಅನಿಶ್ಚಿತೆ ಹಾಗೂ ಏರಿಕೆಗಳನ್ನು ಒಳಗೊಂಡಿದೆ.
2) ಹುಬ್ಬಳ್ಳಿ-ಧಾರವಾಡದಲ್ಲಿ ಹೂಡಿಕೆಯನ್ನು ಕೆಯುಡಬ್ಲ್ಯೂಎಸ್ & ಡಿಬಿ ಮಾಡುತ್ತಿರುವ ಹೂಡಿಕೆಯನ್ನು ಕಳೆದು ಲೆಕ್ಕಹಾಕಲಾಗಿದೆ.

ಮೊದಲನೇ ಮತ್ತು ಎರಡನೇ ಹಂತಗಳನ್ನು ಪರಿಗಣಿಸಿದಾಗ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಪಾಲು ಈ ಕೆಳಕಂಡಂತೆ ಇರುತ್ತದೆ.

| ಪ್ರಸ್ತಾವಿತ ಬಂಡವಾಳ | ಪಾಲು | | % ಪಾಲು | |
|---|---|---|---|---|
| | ರಾಜ್ಯ ಸರ್ಕಾರ | 3 ಸ್ಥಳೀಯ ಸಂಸ್ಥೆಗಳು | ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆ |
| 2444 | 1209 | 1236 | 49% | 51% |

ಹೀಗಾಗಿ ರಾಜ್ಯ ಸರ್ಕಾರದ ಪಾಲು ಈ ಹೂರ್ವದಲ್ಲಿ ಉದ್ದೇಶಿಸಿದ ಹಾಗೆಯೆ ಇರುತ್ತದೆ (ಅಂದರೆ ಶೇ. 50).

ಮೂರು ಸ್ಥಳೀಯ ಸಂಸ್ಥೆಗಳ ಮೂಲ ಸಂದರ್ಭ ಸನ್ನಿವೇಶಗಳನ್ನು (ಬೇಸ್ ಕೇಸ್ ಸೆನಾರಿಯೋ) ಅನುಬಂಧ 1-3 ರಲ್ಲಿ ಲಗತ್ತಿಸಲಾಗಿದೆ ಹಾಗೂ ಮೂರು ಸ್ಥಳಿಯ ಸಂಸ್ಥೆಗಳಲ್ಲಿ ಉದ್ದೇಶಿತ ಘಟಕವಾರು ಹೂಡಿಕೆಯ ವಿವರಗಳನ್ನು ಅನುಬಂಧ 4-6 ರಲ್ಲಿ ನೀಡಿದೆ.

ಮೇಲ್ಕಂಡ ಮೂರು ಮಹಾನಗರಗಳ ನೀರು ಪೂರೈಕೆಯಲ್ಲಿ ಸುಧಾರಣೆಗಳನ್ನು ಮಾಡುವುದಕ್ಕಾಗಿ ಕೆಯುಡಬ್ಲ್ಯೂಎಸ್ & ಡಿಬಿ ತಲಾ ಅಂದಾಜು ರೂ200ಕೋಟಿಗಳ ಪ್ರಸ್ತಾವನೆಗಳನ್ನು ಯುಐಡಿಎಸ್ಎಸ್ಎಮ್‌ಟಿ ಅಡಿ ತಯಾರಿಸಿದ್ದು, ಈ ಪ್ರಸ್ತಾವನೆಗಳು ಮಂಜೂರಾದಲ್ಲಿ ಯುಐಡಿಎಸ್ಎಸ್ಎಮ್‌ಟಿ ಲಭ್ಯವಾಗುವ ಹಣವನ್ನು ವಿಶ್ವಬ್ಯಾಂಕ್ ನೆರವಿನ ಹಣದೊಂದಿಗೆ ಜೋಡಿಸಿಕೊಳ್ಳಬಹುದಾಗಿದೆ.

ಈ ಸಂಬಂಧದಲ್ಲಿ 1) ನಗರ ಸ್ಥಳೀಯ ಸಂಸ್ಥೆಗಳು ಎಸ್.ಎಫ್.ಸಿ.(ಅನ್‌ಟೈಡ್) ಅನುದಾನದ ಶೇ.35ರಷ್ಟು ಹಣವನ್ನು 12 ವರ್ಷಗಳ ಅವಧಿಗೆ (2014-26) ಮೀಸಲಿಡುವ ಮುಖಾಂತರ ಸಾಲ ಸಂಗ್ರಹಿಸಬಹುದು ಮತ್ತು 2) ಪ್ರತಿ ನಗರ ಸ್ಥಳೀಯ ಸಂಸ್ಥೆಯ ಮುಖ್ಯಮಂತ್ರಿಗಳ ರೂ 100 ಕೋಟಿಗಳ ವಿಶೇಷ ಅನುದಾನ(ನಗರೋತ್ಥಾನ- ಮೂರನೇ ಹಂತ) ರೂ. 40 ಕೋಟಿಗಳನ್ನು ಭರಿಸಬಹುದೆಂದು ಊಹಿಸಲಾಗಿದೆ. ಅಲ್ಲದೆ ಸರ್ಕಾರದಿಂದ ನೀರು ಸರಬರಾಜು ಬಾಬ್ತು ಬಿಡುಗಡೆಯಾಗುವ ಇನ್ನಿತರ ಯಾವುದೆ ಅನುದಾನಗಳನ್ನು ಈ ಯೋಜನೆಗಾಗಿ ಮೀಸಲಿಡಬೇಕೆಂದು ಪ್ರಸ್ತಾವಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪಾಲಿನ ಹಣವನ್ನು ಠೇವಣಿ ಮಾಡುವುದಕ್ಕಾಗಿ, ಸಾಲ ಮರುಪಾವತಿ ಮಾಡುವುದಕ್ಕಾಗಿ ಹಾಗೂ ಎರಡನೇ ಹಂತದ ವೆಚ್ಚವನ್ನು ಭರಿಸುವುದಕ್ಕಾಗಿ ಎಸ್ಕ್ರೋ ಅಕೌಂಟ್‌ಗಳನ್ನು ತೆರೆಯಬೇಕಾಗಿ ಪ್ರಸ್ತಾಪಿಸಿದೆ. ಸ್ಥಳೀಯ ಸಂಸ್ಥೆಗಳು ಮುಖ್ಯಮಂತ್ರಿಗಳ ರೂ. 100ಕೋಟಿಗಳ ವಿಶೇಷ ಅನುದಾನ (ನಗರೋತ್ಥಾನ- ಮೂರನೇ ಹಂತ) ಅಡಿಯ ಹಣ, ಎಸ್.ಎಫ್.ಸಿ.(ಅನ್‌ಟೈಡ್) ಅನುದಾನದ ಶೇ.35ರಷ್ಟು ಹಣ ಹಾಗೂ ಸರ್ಕಾರದಿಂದ ಬಿಡುಗಡೆಯಾಗುವ ಇನ್ನಿತರ ಯಾವುದೇ ಅನುದಾನವನ್ನು ಎಸ್ಕ್ರೋ ಅಕೌಂಟ್‌ಗೆ ಠೇವಣಿ ಮಾಡಬೇಕಾಗುತ್ತದೆ. ಮೂರೂ ಮಹಾನಗರ ಪಾಲಿಕೆಗಳು ಈ ಸಂಬಂಧದಲ್ಲಿ ಠರಾವುಗಳನ್ನು ಪಾಸು ಮಾಡಿರುತ್ತವೆ.

ನೀರಿನ ದರಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ನಅಇ 7 ನನೀಸ 2011 ದಿನಾಂಕ 20-01-2011ರಲ್ಲಿ ನಿಗದಿಪಡಿಸಿದ ಪರಿಮಾಣಾಧಾರಿತ ದರಗಳನ್ನು ವಾರ್ಷಿಕ ಶೇ. 2ರಷ್ಟು ಹೆಚ್ಚಳದೊಂದಿಗೆ ಅಳವಡಿಸಲಾಗಿದೆ. ನೀರು ಸರಬರಾಜಿನಿಂದ ಸಂಗ್ರಹವಾಗುವ ಶುಲ್ಕವು ನಿರ್ವಹಣಾ ವೆಚ್ಚವನ್ನು ಭರಿಸಲು ಸಾಕಾಗುತ್ತದೆ.

ಹಾಲಿ ಕ್ವಾಶಿಪ್ ಯೋಜನೆಗಾಗಿ ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಸಮಿತಿ ಇರುತ್ತದೆ(ಈ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ ನಅಇ 168 ಪಿಆರ್‌ಜೆ 2005 ದಿನಾಂಕ 08-02-2006 ರಲ್ಲಿ ರಚಿಸಲಾಗಿದೆ) ಸದರಿ ಸಮಿತಿಯನ್ನು ಕೆಯುಡಬ್ಲ್ಯೂಎಸ್‌ಎಂಪಿ (ಉನ್ನತೀಕರಣ ಯೋಜನೆ) ಅನುಷ್ಠಾನದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಾಗಿ ಮುಂದುವರೆಸಲು ಉದ್ದೇಶಿಸಿದೆ.

ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಈ ಕೆಳಕಂಡಂತೆ ಇರುತ್ತದೆ.

Finance Department concurs for placing the DCN before the Cabinet with the following conditions/clarification.

- It is mentioned that for the capital investment programme(Rs 1579cr) only 50% funding is expected from the World Bank i.e., Rs. 840 crores ($130 million). Since it has been mentioned that the entire share of GOK will be met out of the loan to be taken from the World Bank, it should be clearly mentioned in para 10, 11 & 29(ii) of the Cabinet Note that what is the actual share of Government of Karnataka and how the remaining amount for capital investment in phase-I will be met.
- The Department should mention clearly whether the entire capital investment cost of ULBs (Rs. 470 cr. In Ph-I and Rs. 765 cr. In Ph-II) will be met out of the loan it will raise by earmarking 35% of untied SFC grant and payment of Rs. 40 cr. out of CM's special grant and other grants released for the water supply by the Government to ULBs or a part of World Bank assistance will be passed on to them. If so, the mode of transfer.

- A new Government Order for constituting of Empowered Committee should be issued.
- Normally the World Bank reimburses statutory deductions like taxes and duties. But it is not mentioned in the DCN. Will the contingency fund allocated be utilized for meeting statutory deduction expenditures? This may be clarified by the Implementing Agency.
- The funding pattern shown for the project highlights only Government of Karnataka share and ULB share. But the funding pattern should be shown in the following manner:

| Sl No. | Funding Agency | Phase-I | | | Phase-II | | |
|---|---|---|---|---|---|---|---|
| | | In million $ | In Rs. crore | % | In million $ | In Rs. crore | % |
| 1. | World Bank | | | | | | |
| 2. | State Share | | | | | | |
| 3. | ULB Share | | | | | | |
| | Total | | | | | | |

ಆರ್ಥಿಕ ಇಲಾಖೆಯು ತಿಳಿಸಿರುವ ಅಂಶಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

- It is clarified that the capital investment for Phase-I is proposed to be met through 72% assistance from the World Bank(which is about 50% of total investment of Rs 2444crores under Phasel & II) & 28% contribution by the ULBs. Whereas, the entire capital investment (100%) for Phase-II is proposed to be met out of ULBs contribution: The investment phasing is shown below;

(Rs in Crores)

| ULB | Total Investment | Phase I | | | | | Phase II | | | |
|---|---|---|---|---|---|---|---|---|---|---|
| | | Investment | World Bank assistance | World Bank assistance | ULB contribution | ULB Contribution | Investment | World Bank assistance | World Bank assistance | ULB contribution |
| Gulbarga | 635 | 489 | 72% | 352 | 28% | 137 | 146 | 0% | 0.0 | 100% |
| Belgaum | 663 | 427 | 72% | 308 | 28% | 120 | 236 | 0% | 0.0 | 100% |
| Hubli-Dharwad | 1146 | 763 | 72% | 550 | 28% | 214 | 383 | 0% | 0.0 | 100% |
| Total | 2444 | 1,679 | 72% | 1,209 | 28% | 470 | 765 | 0% | 0 | 100% |

Apart from the capital investment, it is estimated that an amount of Rs 100crores would be required for "project management" ~~& Rs 30 crores~~ for "technical assistance for sector development" under Phase-I. It is proposed to meet the expenditure towards the said components by the State Government. Thus, taking into consideration both phase I & II including project management & technical assistance components, the share of the World Bank, State Government & the three ULBs works out as under;

| Sl No | Funding Agency | Phase I + Phase II | | |
|---|---|---|---|---|
| | | US $ Million | In Rs Cr | % |
| 1 | World Bank | 187 | 1209 | 47 |
| 2 | State Share | 20 | 130 | 5 |
| 3 | ULB Share | 190 | 1235 | 48 |
| | Total | 397 | 2574 | 100 |

- It is clarified that ULBs contribution towards implementation of Phase-I & Phase-II will be met out of the loan it will raise by earmarking 35% of untied SFC grant & payment of Rs 40crore out of CMs special grant & other grants released for water supply by the Government.
- A separate Government order regarding constitution of an Empowered Committee for KUWSMP will be issued.
- The estimated capital investment are inclusive of taxes & duties.
- The funding pattern is shown below

| Sl No | Funding Agency | Phase-I | | | Phase-II | | |
|---|---|---|---|---|---|---|---|
| | | US $ Million | In Rs Cr | % | US $ Million | In Rs Cr | % |
| 1 | World Bank | 187 | 1209 | 67 | 0 | 0 | 0 |
| 2 | State Share | 20 | 130 | 7 | 0 | 0 | 0 |
| 3 | ULB Share | 72 | 470 | 26 | 118 | 765 | 100 |
| | Total | 279 | 1809 | 100 | 118 | 765 | 100 |

ಪ್ರಸ್ತಾವನೆಯ ಬಗ್ಗೆ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವಂತೆ ಕೆಯುಐಡಿಎಫ್‌ಸಿ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

i. 279 ಮಿಲಿಯನ್ ಯುಎಸ್ ಡಾಲರ್(ರೂ.1809 ಕೋಟಿ) ಅಂದಾಜಿನ ಮೊದಲನೇ ಹಂತದ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"ಯನ್ನು ವಿಶ್ವ ಬ್ಯಾಂಕಿನ 187 ಮಿಲಿಯನ್ ಯುಎಸ್ ಡಾಲರ್ (ರೂ.1209 ಕೋಟಿ) ನೆರವಿನೊಂದಿಗೆ ಅನುಷ್ಠಾನಗೊಳಿಸಲು.

ii. ಈ ಕೆಳಕಂಡ ಹಣಕಾಸಿನ ಮಾದರಿಯನ್ನು ಅಳವಡಿಸಲು........

| ಕ್ರ. ಸಂ. | ಫಂಡಿಂಗ್ ಏಜೆನ್ಸಿ | ಹಂತ – I | | | ಹಂತ – II | | |
|---|---|---|---|---|---|---|---|
| | | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % |
| 1 | ವಿಶ್ವ ಬ್ಯಾಂಕ್ | 187 | 1209 | 67 | 0 | 0 | 0 |
| 2 | ರಾಜ್ಯದ ಪಾಲು | 20 | 130 | 7 | 0 | 0 | 0 |
| 3 | ಸ್ಥಳೀಯ ಸಂಸ್ಥೆಯ ಪಾಲು | 72 | 470 | 26 | 118 | 765 | 100 |
| | ಒಟ್ಟು | 279 | 1809 | 100 | 118 | 765 | 100 |

iii. ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ಈ ಕೆಳಕಂಡ ಹಣಕಾಸಿನ ವ್ಯವಸ್ಥೆಗೆ:

(ಅ)ಮೊದಲನೇ ಹಂತದ ಸಾಲ ಮರುಪಾವತಿ ಮತ್ತು ಎರಡನೇ ಹಂತದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಎಸ್.ಎಫ್.ಸಿ.(ಅನ್‌ಟೈಡ್) ಅನುದಾನದ ಶೇ.35ರಷ್ಟು ಹಣವನ್ನು 2014-2041 ವರ್ಷಗಳ ಅವಧಿಗೆ ಮೀಸಲಿಡಲು

(ಆ)ಮುಖ್ಯಮಂತ್ರಿಗಳ ರೂ 100ಕೋಟಿಗಳ ವಿಶೇಷ ಅನುದಾನ (ನಗರೋತ್ಥಾನ- ಮೂರನೇ ಹಂತ) ದಿಂದ ರೂ. 40 ಕೋಟಿಗಳ ಕೊಡುಗೆ ನೀಡಲು.

(ಇ)ತಮ್ಮ ಪಾಲಿನ ಹಣವನ್ನು ಠೇವಣಿ ಮಾಡುವುದಕ್ಕಾಗಿ, ಸಾಲ ಮರು ಪಾವತಿ ಮಾಡುವುದಕ್ಕಾಗಿ ಮತ್ತು ಎರಡನೇ ಹಂತದ ವೆಚ್ಚವನ್ನು ಭರಿಸುವುದಕ್ಕಾಗಿ "ಎಸ್ಕ್ರೋ ಅಕೌಂಟ"ಗಳನ್ನು ತೆರೆಯಲು

(ಈ) ಎಸ್ಕ್ರೋ ಅಕೌಂಟ್‌ಅನ್ನು 2014-2041 ಅವಧಿಗೆ ಚಾಲ್ತಿಯಲ್ಲಿಡಲು ಮತ್ತು

iv. "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಅನುಷ್ಠಾನ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಾಗಿ "ಅಧಿಕಾರಯುಕ್ತ ಸಮಿತಿ"ಯನ್ನು ರಚಿಸಲು.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 244 ಪಿಆರ್‌ಜೆ 2013, ಬೆಂಗಳೂರು, ದಿನಾಂಕ:07-11-2013.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಶ್ವಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"ಯಡಿ 24*7 ನಿರಂತರ ನೀರು ಸರಬರಾಜು ಯೋಜನೆಯನ್ನು ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೂ ವಿಸ್ತರಿಸಲು ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

1) 279 ಮಿಲಿಯನ್ ಯುಎಸ್ ಡಾಲರ್(ರೂ.1809 ಕೋಟಿ) ಅಂದಾಜಿನ ಮೊದಲನೇ ಹಂತದ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"ಯನ್ನು ವಿಶ್ವ ಬ್ಯಾಂಕಿನ 187 ಮಿಲಿಯನ್ ಯುಎಸ್ ಡಾಲರ್ (ರೂ.1209 ಕೋಟಿ) ನೆರವಿನೊಂದಿಗೆ ಅನುಷ್ಠಾನಗೊಳಿಸಲು.

2) ಈ ಕೆಳಕಂಡ ಹಣಕಾಸಿನ ಮಾದರಿಯನ್ನು ಅಳವಡಿಸಲು;

| ಕ್ರ. ಸಂ. | ಫಂಡಿಂಗ್ ಏಜೆನ್ಸಿ | ಹಂತ - I | | | ಹಂತ - II | | |
|---|---|---|---|---|---|---|---|
| | | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % |
| 1 | ವಿಶ್ವ ಬ್ಯಾಂಕ್ | 187 | 1209 | 67 | 0 | 0 | 0 |
| 2 | ರಾಜ್ಯದ ಪಾಲು | 20 | 130 | 7 | 0 | 0 | 0 |
| 3 | ಸ್ಥಳೀಯ ಸಂಸ್ಥೆಯ ಪಾಲು | 72 | 470 | 26 | 118 | 765 | 100 |
| | ಒಟ್ಟು | 279 | 1809 | 100 | 118 | 765 | 100 |

3) ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ಈ ಕೆಳಕಂಡ ಹಣಕಾಸಿನ ವ್ಯವಸ್ಥೆಗೆ;

(ಅ)ಮೊದಲನೇ ಹಂತದ ಸಾಲ ಮರುಪಾವತಿ ಮತ್ತು ಎರಡನೇ ಹಂತದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಎಸ್.ಎಫ್.ಸಿ.(ಅನ್‌ಟೈಡ್) ಅನುದಾನದ ಶೇ.35ರಷ್ಟು ಹಣವನ್ನು 2014-2041 ವರ್ಷಗಳ ಅವಧಿಗೆ ಮೀಸಲಿಡಲು

(ಆ) ಮುಖ್ಯಮಂತ್ರಿಗಳ ರೂ 100ಕೋಟಿಗಳ ವಿಶೇಷ ಅನುದಾನ (ನಗರೋತ್ಥಾನ-ಮೂರನೇ ಹಂತ) ದಿಂದ ರೂ. 40 ಕೋಟಿಗಳ ಕೊಡುಗೆ ನೀಡಲು.

(ಇ) ತಮ್ಮ ಪಾಲಿನ ಹಣವನ್ನು ಠೇವಣಿ ಮಾಡುವುದಕ್ಕಾಗಿ, ಸಾಲ ಮರು ಪಾವತಿ ಮಾಡುವುದಕ್ಕಾಗಿ ಮತ್ತು ಎರಡನೇ ಹಂತದ ವೆಚ್ಚವನ್ನು ಭರಿಸುವುದಕ್ಕಾಗಿ "ಎಸ್ಕ್ರೋ ಅಕೌಂಟ್"ಗಳನ್ನು ತೆರೆಯಲು

(ಈ) ಎಸ್ಕ್ರೋ ಅಕೌಂಟ್‌ಅನ್ನು 2014-2041 ಅವಧಿಗೆ ಚಾಲ್ತಿಯಲ್ಲಿಡಲು ಮತ್ತು

4) "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಅನುಷ್ಠಾನ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಾಗಿ "ಅಧಿಕಾರಯುಕ್ತ ಸಮಿತಿ"ಯನ್ನು ರಚಿಸಲು.

ಈ ಆದೇಶವನ್ನು ದಿನಾಂಕ:30-10-2013ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ:ಸಿ:754/2013ರನ್ವಯ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 420 ವೆಚ್ಚ-9/2013, ದಿನಾಂಕ:28-10-2013ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಗೋಪಾಲಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
7/11/13

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
4) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ., ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯುಎಸ್&ಡಿಬಿ, ಬೆಂಗಳೂರು,
6) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
7) ಜಿಲ್ಲಾಧಿಕಾರಿಗಳು, ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ.
8) ಆಯುಕ್ತರು, ಬೆಳಗಾವಿ, ಗುಲಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ.
9) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ). (ಪ್ರಕರಣ ಸಂಖ್ಯೆ:ಸಿ:754/2013).
10) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.